# ಇದಕೊಳ್ಳಿ ಭವ ರೋಗಕೌಷಧವನು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 63.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 409.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1 with few differences, which are given in yellow highlights.
5. **Note:** Singer has followed lyrics as in Ref. 1.

ಇದ ಕೊಳ್ಳಿ ಇದ ಕೊಳ್ಳಿ ಭವ ರೋಗಕೌಷಧ. ಭಗವಂತನ ನಾಮ ಸ್ಮರಣೆಯಿಂದ ಸಕಲ ರೋಗ ಪರಿಹಾರವಾಗುತ್ತದೆ. ಆದಿ ವ್ಯಾಧಿಗಳು, ಉನ್ಮಾದ ವಿಭ್ರಮ ನಾನಾ ಬಾಧೆಗೆ ಭಗವಂತನ ನಾಮವೇ ಸರ್ವ ಔಷಧ. ಬನ್ನಿ ಎಲ್ಲರೂ ಎಡಬಿಡದೆ ಹರಿ ನಾಮವ ನೆನೆದು ರೋಗ ಮುಕ್ತರಾಗೋಣ, ದುಃಖದಿಂದ ದೂರರಾಗೋಣ.

ರಾಗ: ಕಾಂಭೋಜ ತಾಳ: ಝಂಪೆ

ಇದಕೊಳ್ಳಿ ಭವ ರೋಗಕೌಷಧವನು || ಪ ||
ಇಂದ್ರಿಯವ ಜೈಸುವುದೆ ಇದಕೆ ಇಚ್ಛಾ ಪಥ್ಯ || ಅಪ ||

ವಾಸುದೇವನ ನಾಮ ವಾತವಿಧ್ವಂಸಿನಿ
ಜನಾರ್ದನನ ನಾಮ ಜ್ವರಾಂಕುಶ
ಮಾಧವನ ನಾಮವೇ ಮನಗಂಡ ಮಂಡೂರ
ಮಂಗಳಾತ್ಮಕ ನಾಮ ಮಾಲ್ಯವಸಂತ || 1 || (ಮೌಲ್ಯವಸಂತ)

ಚಿಂತಾಯಕನ ನಾಮ ತ್ರೈಲೋಕ್ಯ ಚಿಂತಾಮಣಿ
ಭುಜಗಶಯನನ ನಾಮ ಭೂಪತಿ ಮಾತ್ರೆ
ರಾಜೀವಲೋಚನನ ನಾಮ ರಸ ಕರ್ಪೂರ
ಸೀತಾಪತಿಯ ನಾಮ ದಿವ್ಯ ಸಿಂಧೂರ || 2 ||

ನಾರಾಯಣನ ನಾಮ ದಿವ್ಯ ತಾಮ್ರ ಭಸ್ಮ
ಲೋಕದೊಡೆಯನ ನಾಮ ಲೋಹ ಭಸ್ಮ
ವೈಕುಂಠಪತಿಯೆಂಬ ವಂಗ ಭಸ್ಮವ ಕೊಳ್ಳಿ
ಶ್ರೀನಿವಾಸನ ನಾಮ ಸ್ವರ್ಣ ಭಸ್ಮ || 3 ||

ರಾಮಚಂದ್ರನೆಂಬ ಪೂರ್ಣ ಚಂದ್ರೋದಯವು
ಕೃಷ್ಣ ಕೃಷ್ಣನೆಂಬ ಶ್ಲೇಷ್ಮ ಕುಠಾರ (ಶ್ಲೇಷ್ಮ ಕುಠಾರ)
ವಾರಿಜಾಂಬಕನೆಂಬ ವಸಂತ ಕುಸುಮಾಕರ
ಕಮಲನಾಭನೆಂಬ ಕರ್ಣಚೂರ್ಣವಿದಕೊ || 4 ||

ಇದನು ಕೊಂಡವರ ಪೆಸರನು ಪೇಳುವೆನು ಕೇಳಿ
ಮುದದಿ ಪ್ರಹ್ಲಾದ ಮುಚುಕುಂದ ಧ್ರುವನು
ಸದಮಲೆ ದ್ರೌಪದಿಯು ಅಜಮಿಳನು ಬದುಕಿದರು
ಪದುಮಾಕ್ಷ ಪುರಂದರ ವಿಠಲನೆಂಬೌಷಧವ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮಂಡೂರ** = ತುಕ್ಕು, ಜಂಗು

**ಮಾಲ್ಯ** = ಮಾಲೆ, ಸರ, ಹೂವಿನ ದಂಡೆ

**ವಂಗ** = ತವರ, ಸೀಸ

**ಶ್ಲೇಷ್ಮ** = ಕಫ, ತ್ರಿದೋಷಗಳಲ್ಲಿ

**ಕುಠಾರ** = ಕೊಡಲಿ, ಮಚ್ಚು

**ಸದಮಲ** = ಪವಿತ್ರವಾದ, ನಿರ್ಮಲ, ಶುದ್ಧ

**Classification:** Keerthane
**Ankita:** purandara vittala
**Location:** NA
**Category:** Bhakti
**Sub-Category:** bhava, roga, oushadha, Krishna, Madhava, mana, karpura, rama, divya, Narayana, loka, bangara, kivi, prahallada, muchukunda, Dhruva, ajamila, draupadi,
**Pravachana:** NA
**Explanation:** NA